

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಸದ್ಧರ್ಮ ನ್ಯಾಯಪೀಠ....

**ಗು**ಹೆಗಳಲ್ಲಿ ಹೆದರಿ ಅವಿತುಕೊಂಡಿದ್ದ ಆದಿಮಾನವ ಹೊರಬಂದು ಗುಡಿಸಲು ಕಟ್ಟಿಕೊಂಡ. ಕ್ರಮೇಣ ಗುಡಿಸಲು ಹೋಗಿ ಪರ್ಣಕುಟೀರವಾಯಿತು. ಮಾಳಿಗೆಯ ಮನೆ ಬಂತು. ಕರಿಹಂಚಿನ ಮನೆ ಹೋಗಿ ಕೆಂಪುಹಂಚಿನ ಮನೆ ಬಂತು. ಮನೆಯ ಮೇಲೊಂದು ಮನೆಯಾಗಿ ಉಪ್ಪರಿಗೆಯ ಮನೆಯಾಯಿತು. ವಿದ್ಯುದ್ದೀಪಗಳಿಂದ ಜಗಮಗಿಸುವ ಸುಂದರವಾದ ಅರಮನೆಯೂ ಆಯಿತು. ಅರಮನೆಯ ಅರಸೊತ್ತಿಗೆಯನ್ನು ಕೆಳಗಿಳಿಸಿ ಹಲವು ಅಂತಸ್ತುಗಳ ಆರ್.ಸಿ.ಸಿ ಮನೆಯೂ ಆಯಿತು. ಮನೆಯೊಳಗೆ ಸಗಣಿಯಿಂದ ಸಾರಿಸುತ್ತಿದ್ದ ನೆಲಕ್ಕೆ ಹಾಸುಗಲ್ಲು ಬಂತು. ಆ ಹಾಸುಗಲ್ಲಿನಲ್ಲಿಯೂ ಆರಂಭದಲ್ಲಿದ್ದ ಚಪ್ಪಡಿಕಲ್ಲು ಹೋಗಿ ಕಡಪಾಕಲ್ಲು, ನಂತರ ರಾಜಾಸ್ಥಾನಕ್ಕೆ ಹೋಗಿ ತಂದ ಮಂಜುಗಡ್ಡೆಯನ್ನು ನಾಚಿಸಬಲ್ಲ ಮಾರ್ಬಲ್, ಬ್ಯಾಡಗಿ ಮೆಣಸಿನಕಾಯಿಯನ್ನು ಮೀರಿಸುವ ಮಿನುಗುತಾರೆಗಳನ್ನುಳ್ಳ ನುಣುಪಾದ ಇಳಕಲ್ಲಿನ ಪಿಂಕ್‌ಗ್ರಾನೈಟ್! ಅಬ್ಬಾ ಎಲ್ಲಿ ನೋಡಿದರಲ್ಲಿ ಎಂತಹ ಮೋಹಕ ಮನೆಗಳು! ಮೋಹಕ ಮೊಗಸಾಲೆ! ಮೋಹಕ ವಿನ್ಯಾಸ! ಮನೆಯ ಹಿಂಬದಿಯಲ್ಲಿ ಮನಮೋಹಕ ಈಜುಕೊಳ! ಸದ್ಯ ಲೋಕಾಯುಕ್ತರ ಗಾಳಕ್ಕೆ ತಿಮಿಂಗಿಲ ಬೀಳದಿದ್ದರೆ ಸಾಕು! ಹಾಗೆಂದು ಸಮಾಧಾನದ ನಿಟ್ಟುಸಿರು ಬಿಡುವಂತಿಲ್ಲ. ಏಕೆಂದರೆ ಮನೆಯೊಳಗೆ ವಾಸವಾಗಿರುವ ಜನರ ಮನಸ್ಸುಗಳಲ್ಲಿ ಮಾತ್ರ ಮುಚ್ಚಲಾಗದ ತಗ್ಗು ಗುಂಡಿಗಳು! 'ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ ಎಂಬ ದುಃಸ್ಥಿತಿ!' ಮನೆಯ ತುಂಬ ಬ್ಯಾಡಗಿ ಮೆಣಸಿನಕಾಯಿಯನ್ನೂ ಮೀರಿಸಬಲ್ಲ ಘಾಟು! ಅದರ ತೀವ್ರತೆ ಪಕ್ಕದ ಮನೆಯವರ ಮೂಗಿಗೂ ತಟ್ಟದೆ ಬಿಟ್ಟಿಲ್ಲ! ಅನೇಕ ವೇಳೆ ಮನೆಯವರು ತಣ್ಣಗಿದ್ದರೂ ಉರಿಯುವಂತೆ ನೆರೆಮನೆಯವರು ಮೂಗುತೂರಿಸಿ ಖಾರ ಅರೆದರೂ ಆಶ್ಚರ್ಯವೇನಿಲ್ಲ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಗಬಾರದೆಂದು ಹುನ್ನಾರ ನಡೆಸಿದವರು ನೆರೆಯವರೇ ಅಲ್ಲವೇ! ಆದರೂ ಇದೀಗ ಚಂದ್ರನಿಗೆ ಲಗ್ಗೆ ಹಾಕಿ ಮುಂದೊಂದು ದಿನ ಮಂಗಳ ಗ್ರಹದ ಅಂಗಳದಲ್ಲಿ ಮನೆ ಕಟ್ಟುವ ವಿಜ್ಞಾನಿಗಳ ಕನಸು! ಆ ಕನಸು ನನಸಾದರೆ ಮದುವೆಮನೆಯಲ್ಲಿ ಶತಮಾನಗಳಿಂದ ಸಾಂಪ್ರದಾಯಿಕವಾಗಿ ಹೇಳಿಕೊಂಡು ಬಂದ 'ಕಾಶ್ಮೀರೇ ವಸತೇ ಕನ್ಯಾ, ಲಂಕಾಯಾಂ ವಸತೇ ವರಃ' ಎಂಬ ಮಂತ್ರ outdated ಆಗುವ ಕಾಲ ಸನ್ನಿಹಿತ. ಭೂಲೋಕದ ಗಂಡು, ಚಂದ್ರಲೋಕದ ಹೆಣ್ಣು, ಮಂಗಳಗ್ರಹದ ಬೀಗರು. ಮದುವೆ ಎಲ್ಲಿ ಯಾವ ಛತ್ರದಲ್ಲಿ ಮಾಡಬೇಕೆಂಬುದೇ ದೊಡ್ಡ ಸಮಸ್ಯೆ. ಚಂದ್ರಲೋಕದಲ್ಲಿ ಬಹಳ ಚಳಿ ಎಂದು ಗಂಡಿನವರು, ಭೂಲೋಕದಲ್ಲಿ ಬಹಳ ಬಿಸಿಲು ಎಂದು ಹೆಣ್ಣುಹೆತ್ತವರು. ಇವೆರಡೂ ತಮಗೆ ತುಂಬಾ ದೂರ ಎಂದು ಮಂಗಳಗ್ರಹದ ಬೀಗರು. ಮದುವೆ ಮನೆಗೆ ವಕ್ಕರಿಸುವ ಈ (ಅ)ಮಂಗಳ 'ಗ್ರಹ'ಗಳ ಮುಂದೆ ಹೆಣ್ಣುಗಂಡಿನವರ ಆಟ ಏನೂ ನಡೆಯುವುದಿಲ್ಲ. ಕೊನೆಗೆ ಎಲ್ಲರಿಗೂ ಅನುಕೂಲವಾಗುವಂತೆ ಮದುವೆ ಅಂತರಿಕ್ಷದಲ್ಲಿ ಎಂದು ಸರ್ವಸಮ್ಮತಿಯಿಂದ ತೀರ್ಮಾನ. ವಿಜ್ಞಾನಿಗಳು ನಿರ್ಮಿಸಿದ 'ವ್ಯೋಮಕೇಶ್ವರ ಕಲ್ಯಾಣಮಂದಿರ'ದಲ್ಲಿ! ಅಂತರಿಕ್ಷಯಾನಗಳ countdown ಆರಂಭ!

> **ಪೃಥಿವ್ಯಾಂ ವಸತೇ ವರಃ ಚಂದ್ರಲೋಕೇ ತು ಶೋಭನಾ ।**
> **ಮಂಗಳಾದಾಗತಾಃ ಸರ್ವೇ ನಿರ್ವಿಘ್ನಂ ಕುರು ಮಾಧವ ॥**

ಎಂದು ಪುರೋಹಿತರು 'ಚಂದ್ರಯಾನ'ದ ಮಾಧವನ್ ನಾಯರ್ ಅವರನ್ನು ಉದ್ದೇಶಿಸಿ ಹೇಳುವ ಮಂತ್ರ, ಸಪ್ತಪದಿ, ನಾಗೋಲೆ ಇತ್ಯಾದಿ ವಿವಾಹ ವಿಧಿಗಳನ್ನು ಮದುವೆಗೆ ಹೋಗಲು ಪುರುಸೊತ್ತಾಗದ ಭೂಲೋಕದ ಬೀಗರು ದೂರದರ್ಶನದಲ್ಲಿ ವೀಕ್ಷಿಸಬಹುದು.

ಚಂದ್ರಲೋಕದಲ್ಲಿ ಮನೆ ಮಾಡಿದರೂ, ಮನೆ ಎಷ್ಟೇ ಸುಂದರವಾಗಿದ್ದರೂ, ಎಷ್ಟೇ ತಂಪಾಗಿದ್ದರೂ, ಮನೆಯೊಳಗೆ ವಾಸವಾಗಿರುವ ಕುಟುಂಬದ ಸದಸ್ಯರ ಮನಸ್ಸು ತಂಪಾಗಿಲ್ಲದಿದ್ದರೆ ಜೀವನ ನರಕಸದೃಶವಾಗುತ್ತದೆ.

> **ಆಶೆಯಾಮಿಷ, ರೋಷ-ಹರುಷ ವಿಷಯಾದಿಗಳೆಲ್ಲಾ ಒಂದೇ.**

**ಏನನೋದಿ, ಏನ ಕೇಳಿ, ಏನು ಫಲ?**
**ಕುಲಜನೆಂಬುದಕ್ಕೆ ಆವುದು ದೃಷ್ಟ?**

ಎಂದು ಬಸವಣ್ಣನವರು ಹೇಳುವಂತೆ ಯಾವ ಜಾತಿಯವರಾದರೇನು? ಯಾವ ಕಾಲವಾದರೇನು? ಜನರ ಗುಣಸ್ವಭಾವಗಳೆಲ್ಲಾ ಒಂದೇ. ಜಗತ್ತಿನಲ್ಲಿ ಪೈಪೋಟಿಯ ಮೇಲೆ ನಿರ್ಮಾಣವಾದ ನೂರಾರು ಅಂತಸ್ತು ಕೆಳಕ್ಕೆ ಉರುಳಿ ಬಿತ್ತು. ಇದನ್ನೆಲ್ಲಾ ನೋಡಿದಾಗ 'ಸೋರುತಿಹುದು ಮನೆಯ ಮಾಳಿಗಿ ಅಜ್ಞಾನದಿಂದ....' ಎನ್ನದೆ ಬೇರೆ ವಿಧಿಯಿಲ್ಲ.

ವ್ಯಕ್ತಿ ಸರಿಯಾದ ದಾರಿಯಲ್ಲಿ ನಡೆಯಬೇಕಾದರೆ ಅವನಿಗೆ ಮೂರು ರೀತಿಯ ಭೀತಿಗಳು ಇರಬೇಕಾಗುತ್ತದೆ: 1. ಆತ್ಮಭೀತಿ (fear of one's conscience), 2. ಸಮಾಜ ಭೀತಿ (fear of the society), 3. ಕಾನೂನು ಭೀತಿ (fear of the law). ಈ ಮೂರೂ ಭೀತಿಗಳು ಅವುಗಳ ಅನುಕ್ರಮದಲ್ಲಿ ಶ್ರೇಷ್ಠತೆಯನ್ನು ಪಡೆಯುತ್ತವೆ. ಮೊದಲನೆಯದಾದ ಆತ್ಮಭೀತಿ ಇರುವ ವ್ಯಕ್ತಿ ಉತ್ತಮ ಸಂಸ್ಕಾರ ಉಳ್ಳವನು. ಎಂಥ ಸಂದರ್ಭದಲ್ಲೂ ಅವನು ತಪ್ಪು ಮಾಡುವುದಿಲ್ಲ; ಯಾವಾಗಲೂ ಸಹ ತನ್ನ ಆತ್ಮಕ್ಕೆ ಅಂಜಿ ಅವನು ಸದಾ ಸರಿದಾರಿಯಲ್ಲಿಯೇ ನಡೆಯುತ್ತಾನೆ. ಎರಡನೆ ದರ್ಜೆಗೆ ಸೇರಿದ ಸಮಾಜದ ಭೀತಿಯುಳ್ಳವನು, ನಾಲ್ಕು ಜನ ನೋಡಿದವರು ಏನೆಂದಾರೆಂಬ ಸಾಮಾಜಿಕ ಭೀತಿಯಿಂದ ಸರಿಯಾದ ದಾರಿಯಲ್ಲಿ ನಡೆಯಲು ಪ್ರಯತ್ನ ಮಾಡುತ್ತಾನೆ. ಇವೆರಡೂ ಭೀತಿಗಳಿಗಿಂತ ಭಿನ್ನವಾದದ್ದು ಮೂರನೆಯ ದರ್ಜೆಗೆ ಸೇರಿದ ಕಾನೂನಿನ ಭೀತಿ. ಯಾವಾತನಲ್ಲಿ ಆತ್ಮಭೀತಿಯಿಲ್ಲವೋ, ಸಮಾಜದ ಭೀತಿ ಇಲ್ಲವೋ ಕೊನೆಯ ಪಕ್ಷ ಅವನು ಕಾನೂನಿನ ಭೀತಿಯಿಂದಲಾದರೂ ಸರಿದಾರಿಯಲ್ಲಿ ಹೋಗಲು ಪ್ರಯತ್ನ ಮಾಡಲೇಬೇಕಾಗುತ್ತದೆ. ಇಲ್ಲದೇ ಹೋದರೆ ಮುಂದಿನ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ತಲೆಯ ಮೇಲೆ ಹೆಲ್ಮೆಟ್ ಹಾಕಿಕೊಳ್ಳಬೇಕೆಂಬ ಕಾನೂನು ಇರುವುದು ತನ್ನ ತಲೆಯ ರಕ್ಷಣೆಗಾಗಿ, ತನ್ನ ಹೆಂಡತಿ ಮಕ್ಕಳ ಒಳಿತಿಗಾಗಿ ಎಂಬ ಪರಿಕಲ್ಪನೆಯೇ ಮೋಟಾರ್ ಸೈಕಲ್ ಸವಾರರಿಗಿರುವುದಿಲ್ಲ. ದೂರದರ್ಶನದಲ್ಲಿ ಬರುವ ಹೆಲ್ಮೆಟ್ ಜಾಹೀರಾತಿನಲ್ಲಿ ಕಲ್ಲಂಗಡಿ ಹಣ್ಣನ್ನು ಹೆಲ್ಮೆಟ್ ಒಳಗಡೆ ಇಟ್ಟು ಬೀಳಿಸಿ ತೋರಿಸುತ್ತಾರೆ. ಹಣ್ಣು ಒಡೆಯುವುದಿಲ್ಲ. ಅದಿಲ್ಲದೆ ಬೀಳಿಸಿದಾಗ ಒಡೆದು ಹೋಳಾಗಿ ಕೆಂಬಣ್ಣದ ರಸ ಚಿಮ್ಮುತ್ತದೆ. ಅಪಘಾತ ಸಂಭವಿಸಿದಾಗ ಈ ರೀತಿ ತನ್ನ ತಲೆ ಒಡೆದು ಹೋಳಾಗಿ ರಸ್ತೆಗೆ ರಕ್ತದೋಕುಳಿಯಾಗುತ್ತದೆ ಎಂಬ ಭಯದಿಂದ ಅದೆಷ್ಟು ಜನ ಸವಾರರು ಮನೆಯಿಂದ ಹೊರಡುವಾಗ ಹೆಲ್ಮೆಟ್ ಹಾಕಿಕೊಳ್ಳುತ್ತಾರೆ? ಮರೆಯಲ್ಲಿರುವ ಹದ್ದಿನ ಕಣ್ಣುಗಳ ಪೋಲೀಸರಿಗೆ 'ತಲೆದಂಡ' ಕೊಡಬೇಕಾಗುತ್ತದೆ ಎಂಬ ಭಯದಿಂದ ಹಾಕಿಕೊಳ್ಳುವ ಸವಾರರ ಸಂಖ್ಯೆಯೇ ಜಾಸ್ತಿ.

ಮಠ-ಮಂದಿರಗಳು ತಮ್ಮಲ್ಲಿಗೆ ಬರುವ ಭಕ್ತಾದಿಗಳ ಲೌಕಿಕ ಜೀವನದ ಕಷ್ಟಕೋಟಲೆಗಳನ್ನು ನಿವಾರಿಸಿ ಅವರನ್ನು ಆಧ್ಯಾತ್ಮಿಕ ಪಥದಲ್ಲಿ ಕರೆದೊಯ್ಯುವ ಪ್ರಮುಖ ಗುರಿಯನ್ನು ಹೊಂದಿವೆ. ನಮ್ಮ ಮಠದ ಪರಂಪರೆಯಲ್ಲಿ ಹಿಂದಿನ ಗುರುವರ್ಯರೆಲ್ಲರೂ ಶಿಷ್ಯರಿಗೆ ಧರ್ಮಬೋಧೆಯನ್ನು ಮಾಡುವುದರ ಜೊತೆಗೆ ನ್ಯಾಯ ಪ್ರದಾನವನ್ನು ಮಾಡುವ ನ್ಯಾಯಾಧೀಶರ ಪಾತ್ರವನ್ನೂ ವಹಿಸಿದ್ದಾರೆ. ಜನರಿಗೆ ನ್ಯಾಯ ನಿರ್ಣಯ ನೀಡುವಲ್ಲಿ ನಮ್ಮ ಮಠ ಬಹಳ ಪ್ರಾಚೀನ ಕಾಲದಿಂದಲೂ ಪ್ರಧಾನ ಪಾತ್ರವನ್ನು ವಹಿಸಿದೆ. ಚರಿತ್ರಾರ್ಹ ಬೇಲೂರು-ಹಳೇಬೀಡು ಸಮೀಪದಲ್ಲಿರುವ ಯಲಹಂಕ ಗ್ರಾಮದಲ್ಲಿ ನಮ್ಮ ಗುರುಪರಂಪರೆಗೆ ಸೇರಿದ ಒಂದು ಮಠವಿದೆ. ಎರಡು ಶತಮಾನಗಳ ಹಿಂದಿನ ಅಲ್ಲಿಯ ಹಳೆಯ ಕಾಗದ ಪತ್ರಗಳನ್ನು ಶೋಧಿಸಿದಾಗ ಬಹಳ ಅಪರೂಪದ ಒಂದು ದಾಖಲೆ ನಮಗೆ ದೊರೆಯಿತು. ಅದು ಕ್ರಿ.ಶ. 1874 ರಲ್ಲಿ ನಮ್ಮ ಮಠದ ಆಡಳಿತ ವ್ಯಾಪ್ತಿಗೆ ಸೇರಿದ ಬೇಲೂರು ತಾಲ್ಲೂಕು ಬೀಕನಹಳ್ಳಿಯಲ್ಲಿ ನಡೆದ ಒಂದು ರೋಚಕವಾದ ಪ್ರಕರಣ. ಈ ಗ್ರಾಮದಲ್ಲಿದ್ದ ಹುಲಿಯಣ್ಣ ಎಂಬ ಶಿಷ್ಯನು ಆಗಿನ ನಮ್ಮ ಗುರುಪರಂಪರೆಯ ಗುರುಗಳಾಗಿದ್ದ ಶ್ರೀ ಶಿವನಂಜುಂಡ ದೇಶಿಕೇಂದ್ರ ಮಹಾಸ್ವಾಮಿಗಳವರಿಗೆ ಒಂದು ಫಿರ್ಯಾದನ್ನು ಸಲ್ಲಿಸಿದ್ದಾನೆ. ಅವನ ಹೆಂಡತಿ ಚೆನ್ನಮ್ಮಿಯ ಮೇಲೆ ಅದೇ ಗ್ರಾಮದ ಮಲ್ಲಪ್ಪನ ಮಗಳು ಗಂಗಮ್ಮಿ ಎಂಬುವವಳು ದಾರಿಯಲ್ಲಿ ಉಗುಳಿದಳು ಎಂಬುದೇ ಅವನ ಫಿರ್ಯಾದು. ಹಾಡು ಹಗಲೇ ಕೊಲೆಯಾದರೂ ಖುಲಾಸೆಯಾಗುವ ಇಂದಿನ ಕಾಲದಲ್ಲಿ ಅಂದಿನ ಆ ಪ್ರಕರಣದ ವಿವರಗಳನ್ನು ಕೇಳಿದರೆ ಯಾರಿಗಾದರೂ ನಗು ಬರುವುದು ಸಹಜ. ಆಗಿನ ಕಾಲದಲ್ಲಿ ದಾರಿಯಲ್ಲಿ ಹೋಗುವಾಗ ಒಬ್ಬರನ್ನು ಕಂಡು ಮತ್ತೊಬ್ಬರು ಉಗುಳುವುದು 'ಉಚ್ಛಿಷ್ಟ ಅಪರಾಧ' ಎಂದು ಪರಿಗಣಿತವಾಗಿತ್ತು. ಆಗಿನ ನಮ್ಮ ಗುರುಗಳು ದೂರು ಬಂದ ತಕ್ಷಣವೇ ಆ ಭಾಗದ ತಮ್ಮ ಶಿಷ್ಯಪ್ರಮುಖರಾದ ಪುಪ್ಪಣ್ಣಶೆಟ್ಟರು ಮತ್ತು ಚೆನ್ನಬಸಪ್ಪಶೆಟ್ಟರಿಗೆ ಪ್ರಕರಣದ ವಿಚಾರಣೆಯನ್ನು ಮಾಡಲು ಆದೇಶಿಸಿ ನಿರೂಪ ಪತ್ರ ಹೊರಡಿಸಿದರು.

ನಿರೂಪ ಪತ್ರ ಬಂದ ನಾಲ್ಕೇ ದಿನಗಳಲ್ಲಿ ಶಿಷ್ಯಪ್ರಮುಖರು ವಿಚಾರಣೆ ನಡೆಸಿ ಅದೇ ದಿನವೇ ಪೂಜ್ಯ ಗುರುವರ್ಯರಿಗೆ ವರದಿ ಮಾಡಿರುತ್ತಾರೆ. ವಿಚಾರಣೆಯ ವಿವರ ಹೀಗಿದೆ: ಆ ಹಿರಿಯರು ಗ್ರಾಮದಲ್ಲಿ ಹಲಗೆ

ಸಾರಿಸಿ ಪಂಚಾಯಿತಿ ಕಟ್ಟೆಗೆ ಜನರನ್ನು ಸೇರಿಸುತ್ತಾರೆ. ನಿನ್ನ ಹೆಂಡತಿ ಚೆನ್ನಮ್ಮಿಯ ಮುಖದ ಮೇಲೆ ಆರೋಪಿ ಗಂಗಮ್ಮಿಯು ದಾರಿಯಲ್ಲಿ ಉಗುಳಿದಳೆಂಬುದಕ್ಕೆ ಯಾರು ಸಾಕ್ಷಿ ಎಂದು ಫಿರ್ಯಾದಿಯಾದ ಹುಲಿಯಣ್ಣನನ್ನು ಕೇಳುತ್ತಾರೆ. ಕಣ್ಣಾರೆ ಕಂಡ ಸಾಕ್ಷಿದಾರರು ಯಾರೂ ಇರುವುದಿಲ್ಲ. ಒಟ್ಟು 92 ಜನ ಸಾಕ್ಷಿಗಳನ್ನು ವಿಚಾರ ಮಾಡಿದರೂ ಎಲ್ಲರೂ ಅವರಿವರ ಮೇಲೆ ಹೇಳುವವರೇ ಹೊರತು ಯಾರೂ ಕಣ್ಣಾರೆ ಕಂಡವರಲ್ಲ. ಕೊನೆಗೆ, ಕಣ್ಣಾರೆ ನೋಡಿದವರು ಯಾರಾದರೂ ಇದ್ದರೆ ಹಾಜರು ಪಡಿಸು ಎಂದು ಫಿರ್ಯಾದಿ ಹುಲಿಯಣ್ಣನನ್ನು ಕೇಳಿದರೆ ಅವನು "ಸ್ವಾಮಿ ನನ್ನ ಹೆಂಡತಿ ಮಾತು ಕಟ್ಟಿಕೊಂಡು ಫಿರ್ಯಾದು ಕೊಟ್ಟದ್ದು ನನ್ನದೇ ತಪ್ಪಾಯಿತು" ಎಂದು ತಪ್ಪೊಪ್ಪಿಕೊಳ್ಳುತ್ತಾನೆ. ಹೀಗೆ ಜೂಟಾ ಫಿರ್ಯಾದು ಕೊಟ್ಟ ಹುಲಿಯಣ್ಣನಿಗೆ ಎರಡು ರೂಪಾಯಿ ದಂಡ ವಿಧಿಸುತ್ತಾರೆ. ಅವನು ನಾನು ಬಹಳ ಬಡವ, ದಂಡ ಮಾಫಿ ಮಾಡಿರೆಂದು ಕೇಳುತ್ತಾನೆ. ಮಾಫಿ ಮಾಡುವ ಹಕ್ಕು, ಅಧಿಕಾರ ನಮಗಿಲ್ಲವೆಂದು ಪೂಜ್ಯ ಗುರುವರ್ಯರ ಚಿತ್ತಕ್ಕೆ ಬಿಟ್ಟಿದೆ ಎಂದು ವರದಿ ಮಾಡಿರುತ್ತಾರೆ. ಮುಂದೇನಾಯಿತೆಂಬುದಕ್ಕೆ ದಾಖಲೆಗಳು ಸಿಕ್ಕಿಲ್ಲ. ಶಿಷ್ಯಪ್ರಮುಖರು ವಿಚಾರಣೆ ನಡೆಸಿ ಸುಳ್ಳು ದೂರು ನೀಡಿದ ಅರ್ಜಿದಾರನಿಗೇ ದಂಡ ವಿಧಿಸಿದ ಈ ಪ್ರಕರಣ ಮತ್ತು ವಿಚಾರಣೆ ಮಾಡಿದ ಕ್ರಮ ಇಂದಿನ ನ್ಯಾಯಾಲಯಗಳ ವ್ಯವಸ್ಥೆಯನ್ನು ಸರಿಗಟ್ಟುವಂತಿದೆ. ಇಂದು ನ್ಯಾಯಾಲಯಗಳ ಕಾರ್ಯಕಲಾಪಗಳು ಕನ್ನಡದಲ್ಲಿ ನಡೆಯಬೇಕೆನ್ನುವುದಕ್ಕೆ ಮೇಲ್ಪಂಕ್ತಿಯಾಗಿದೆ. ದಾಖಲೆಯ ಪೂರ್ಣ ಪಾಠ ಹೀಗಿದೆ:

**ಭಾವ ಸಂ॥ ದ ಶ್ರಾವಣ ಶುದ್ಧ ೧೫ ರಲ್ಲು ಬೀಕನಹಳ್ಳಿ ಗ್ರಾಮದಲ್ಲು ಯಿರುವ ಸರ್ವಮೊಕ್ತ್ಯಾರು ಪುಪ್ಪಂಣ ಚಂನಬಸಪ್ಪ ಸಹ ಬೀಕನಹಳ್ಳಿ ಗ್ರಾಮದ ಹುಲಿಯಂಣನ ಕೇಳಲ್ಪಟ್ಟ ಸವಾಲು:**

- **ಸವಾಲು: ನಿಂನ ಹೆಂಡ್ತಿ ಚೆನ್ನಂಮಿಗು - ದಿಡ್ಡೆಹಟ್ಟಿ ಮಲ್ಲಂಣನ ಮಗಳು ಗಂಗಂಮಿಗೂ ಉಚ್ಛಿಷ್ಟ ಸ್ಪರ್ಶ ನೆಡದ್ದಾಗಿ ಶ್ರೀ ಸಾಂನಿಧ್ಯಕ್ಕೆ ಬಿಂನಹ ಪತ್ರಿಕಾ ಮುಖಾಂತ್ರ ತಿಳಿಯಿತು.**
- **ಜವಾಬು: ನನ್ನ ಹೆಂಡ್ತಿಗು ದಿಡ್ಡೆಹಟ್ಟಿ ಮಲ್ಲಣ್ಣನ ಮಗಳು ಗಂಗಂಮನು ಉಗುಳಿದಳೆಂದು ಬಲಗೈ ಕಾಳ - ಗಿರಿ ವಿರತ್ತಯ್ಯ ಈ ಪರ್ಕಾರ ಹೇಳಿದ್ದರಿಂದ ನಾನು ಕಂಡದ್ದೇ ಹೊರತಾಗಿ ನಾನು ಕಂಣಲ್ಲಿ ನೋಡಲಿಲ್ಲ. ನನ್ನ ಹೆಂಡ್ತಿಯು ಸದ್ರಿ ಗಂಗಂಮಿ ಉಗುಳಿದಳೆಂದು ಹೇಳಿದಳು.**
- **ಸವಾಲು: ಕಾಳನು ಕರ್ತಿಕೆರೆ ಮೊಕ್ಕಾಂನಲ್ಲಿ ಶ್ರೀಯವರ ರೂಬು ರೂಬು ಕೈಫಿಯತ್ತು ಮಾಡುವ ಕಾಲದಲ್ಲಿ ಯೇನು ಕೈಫತ್ತು ಬರೆಸಿಯಿರುತ್ತಾನೆ ನೀನು ಕೇಳಿರುತ್ತೀಯಾ?**
- **ಜವಾಬು: ಸದ್ರಿ ಕಾಳನು ಕರ್ತಿಕೆರೆ ಮೊಕ್ಕಾಂನಲ್ಲಿ ಶ್ರೀಯವರ ರೂಬು ರೂಬು ಸದ್ರಿ ಗಂಗಮ್ಮಿಯು ಉಗಳಲಿಲ್ಲವೆಂದು ಕೈಫತ್ತು ಬರಸಿಯಿರುತ್ತಾನೆ. ನನಗೆ ಕರ್ತಿಕೆರೆ ಮೊಕ್ಕಾಂನಲ್ಲಿ ಉಗುಳಿದಕ್ಕೆ ೩ ರೂಪ್ಯಾ ಅಪರಾಧವಾಗಿರುತ್ತೆ.**
- **ಸವಾಲು: ಸದರಿ ಮಲ್ಲಪ್ಪನ ಮಗಳು ಗಂಗಮ್ಮಿಯು ಉಗುಳಿದ್ದಂನ ಯಿಂನು ಯಾವ ವಿಧದಿಂದ ರುಜುವಾತು ಮಾಡುತ್ತೀಯ?**
- **ಜವಾಬು: ಇನ್ನು ಯಾವ ವಿಧದಿಂದ ರುಜುವಾತು ಮಾಡಿಕೊಡುವದಕ್ಕೆ ಆಗುವದಿಲ್ಲ. ಸದರಿ ಸಾಕ್ಷಿಯವನಿಂದ ಶಿವಾಯ ಯಿಂನ್ಯಾವದು ರುಜುವಾತು ಕೊಡುವದಕ್ಕೆ ಆಗುವದಿಲ್ಲ.**
- **ಸವಾಲು: ಸದ್ರಿ ಗಂಗಮ್ಮಿಯು ಉಗುಳಿದ ರುಜುವಾತು ಮಾಡಿಕೊಡುವುದಕ್ಕೆ ಆಗುವುದಿಲ್ಲವೆಂತಾ ಹೇಳುತ್ತೀಯಷ್ಟೆ? ನೀನು ಸುಳ್ಳು ಫಿರಿಯಾದು ಮಾಡಿದ ಹಾಗೆ ಆಯಿತೋಯಿಲ್ಲವೋ?**
- **ಜವಾಬು: ಸದ್ರಿ ಸಾಕ್ಷಿಯವರು ಕಂಡು ಹೇಳದೆ ಯಿದ್ದದರಿಂದ ನಾನು ಮಾಡಿದ ಫಿರಿಯಾದು ಸುಳ್ಳು ಆಯಿತು.**
- **ಸವಾಲು: ನೀನು ಮಾಡಿದ ಸುಳ್ಳು ಫಿರಿಯಾದಿಗೆ ವಿಧಿಸುವ ಅಪರಾಧಕ್ಕೆ ಪಾತ್ರನಾಗುತ್ತೀಯಾ?**
- **ಜವಾಬು: ನಾನು ಮಾಡಿದಂತಾ ಸುಳ್ಳು ಫಿರಿಯಾದಿನ ತಪ್ಪಿಗೆ ವಿಧಿಸುವ ಅಪರಾಧಕ್ಕೆ ಪಾತ್ರನಾಗುತ್ತೇನೆ.**
- **ಸವಾಲು: ವೋದಿ ಹೇಳಿದ ಕೈಫತ್ತು ಕೇಳಿದೆಯಾ? ರುಜು ಮಾಡುತ್ತೀಯಾ?**
- **ಜವಾಬು: ವೋದಿ ಹೇಳಿದ ಕೈಫತ್ತು ಕೇಳಿದೆ. ರುಜು ಮಾಡುತ್ತೇನೆ.**

| | |
|---|---|
| **ಉಲಿಯಂಣನ ರುಜು** | **ಬೀಕನಹಳ್ಳಿ ಸಿದ್ದಲಿಂಗೈಯ್ನ ಸಾಕ್ಷಿ** |
| **ಮರುಳುಸಿದಂಣನ ಸಾಕ್ಷಿ** | **(ರುಜು) ಪುಪ್ಪಂಣ ಸ। ಮೊ।** |
| **ಮಠದ ಸಿವಲಿಂಗಯ್ಯನವರ ಕೈಬರಹ** | **(ರುಜು) ಚಂನಬಸವಪ್ಪ ಸ। ಮೊ।** |

**ಭಾವ ಸಂ॥ ದ ಶ್ರಾವಣ ಶು॥ ೧೫ ರಲ್ಲು ರವಾನಿಸಿದೆ.**

**ರುಜು ಚಂನಬಸವಪ್ಪ ಸ। ಮೊ।**

ಇದೊಂದು ಅಪರೂಪದ ಪ್ರಕರಣ. ಇಂದಿನ ಶಬ್ದಗಳಲ್ಲಿ ಹೇಳಬಹುದಾದರೆ ಇದು ಸನ್ 1874 ರಲ್ಲಿ ನಮ್ಮ ಮಠ ಮಾಡಿದ ಕಾನೂನಿನ ಸೇವೆ. ಹಿಂದಿನ ಕಾಲದಲ್ಲಿ ಜನರ ತಪ್ಪುಗಳನ್ನು ತಿದ್ದಿ ಅವರನ್ನು ಸರಿದಾರಿಯಲ್ಲಿ ನಡೆಸಿಕೊಂಡು

ಬಂದ ನಮ್ಮ ಮಠದಲ್ಲಿ ಇಂಥ ಅನೇಕ ಪ್ರಕರಣಗಳು ದಾಖಲಾಗಿವೆ. ಈ ಪರಂಪರೆಯ ಮುಂದುವರೆದ ಭಾಗವೇ ಪ್ರತಿ ಸೋಮವಾರ ನಮ್ಮ ಸಮ್ಮುಖದಲ್ಲಿ ಸಿರಿಗೆರೆಯಲ್ಲಿ ನಡೆಯುವ 'ಸದ್ಧರ್ಮ ನ್ಯಾಯಪೀಠ'.

ಇಂದಿನ ಸಾಮಾಜಿಕ ಜೀವನದಲ್ಲಿ ಜನರಲ್ಲಿ ದ್ವೇಷ, ರೋಷ, ಹಟ, ಮಾತ್ಸರ್ಯ, ಕುಯುಕ್ತಿಗಳು ಮೇರೆ ಮೀರಿ ಬೆಳೆಯುತ್ತಿವೆ. ಈ ಕಾರಣದಿಂದಾಗಿ ಹಟಚಟಗಳಿಗೆ ಬಿದ್ದು ಹಳ್ಳಿಜನರು ಹಾಳಾಗುತ್ತಿದ್ದಾರೆ. ಹಟಚಟಗಳಿಗಾಗಿ ತಮ್ಮೆಲ್ಲ ಅಡವು ಆಸ್ತಿ ಕಳೆದುಕೊಳ್ಳುತ್ತಿದ್ದಾರೆ. ಅಡವು ಆಸ್ತಿ ಹೋದರೂ ಚಿಂತೆಯಲ್ಲ, ಹಿಡಿದ ಹಟ ಗೆಲ್ಲಬೇಕು. ಆದರೆ ಅದರ ಪರಿಣಾಮ? **'ಗೆದ್ದವನು ಸೋತ, ಸೋತವನು ಸತ್ತ !'** ಇದೇ ಅರ್ಥದಲ್ಲಿ ಹಳ್ಳಿಯ ಹಿರಿಯರ ಬಾಯಿಂದ ಕೇಳಿಬರುವ ಇನ್ನೊಂದು ಅನುಭವದ ಮಾತು: ನ್ಯಾಯಾಲಯಗಳಲ್ಲಿ ಕೇಸುಗಳನ್ನು ಗೆಲ್ಲಬೇಕೆಂದರೆ **'ಕುಬೇರನಷ್ಟು ಖಜಾನೆ ಬೇಕು, ಬ್ರಹ್ಮನಷ್ಟು ಆಯುಸ್ಸು ಬೇಕು!'**

5.11.2008

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑